# ಶ್ರೀಧರ್ ಎಂಬ ಉಜ್ವಲ ಪ್ರತಿಭೆ

**‘ಸಲಗ’ ಸಿನಿಮಾದಲ್ಲಿನ ಸಾಲು ಸಾಲು ಪ್ರತಿಭಾವಂತ ನಟರ ನಡುವೆಯೇ ಉಜ್ವಲವಾಗಿ ಬೆಳಗಿದ ಪ್ರತಿಭಾವಂತ ನಟ ಶ್ರೀಧರ್. ರಂಗಭೂಮಿಯ ಸತ್ವವುಂಡು ಬೆಳೆದ ಈ ಹುಡುಗನಿಗೆ ಚಿತ್ರರಂಗದಲ್ಲಿ ಬೆಳೆಯುವ ಹಂಬಲವಿದೆ.**

■ **ಪದ್ಮನಾಭ ಭಟ್**



‘ನನ್ನ ಹೆಸ್ರು ಶ್ರೀಧರ್ ಅಂತ. ಸಿನಿಮಾದಲ್ಲಿ ಶ್ರೀಧರ್ ಕಾವಾ ಅಂತ ಹಾಕಿದಾರಂತೆ. ಎಲ್ಲ ಕಡೆ ಜನ ಜ್ಯೂನಿಯರ್ ಸಲಗ, ಸಲಗ ಶ್ರೀಧರ್ ಹೀಗೆ ಏನೇನೋ ಹೆಸರು ಹಿಡಿದು ಕರೀತಿದಾರೆ. ಯಾವ ಹೆಸರು ಉಳಿದುಕೊಳ್ಳುತ್ತೋ ನನಗೂ ಗೊತ್ತಿಲ್ಲ’

ತುಸು ಹಿಂಜರಿಕೆಯ ಮತ್ತು ರಾಶಿ ಖುಷಿಯಲ್ಲಿ ಹೀಗೆಂದ ಶ್ರೀಧರ್ ಧ್ವನಿಯಲ್ಲಿ ಹೊಸ ಕನಸೊಂದು ಶುರುವಾದ ಉಮೇದಿಯಿತ್ತು. ಅದು ನಾಳೆ ಏನೆಲ್ಲ ಆಗಿ ಬೆಳೆಯಬಹುದು, ಎಲ್ಲಿಗೆ ತಲುಪಬಹುದು ಎಂಬ ಸಣ್ಣ ಆತಂಕವೂ ಇದ್ದಂತಿತ್ತು.

ಇತ್ತೀಚೆಗೆ ಬಿಡುಗಡೆಯಾದ ದುನಿಯಾ ವಿಜಯ್ ನಿರ್ದೇಶಿಸಿದ ನಟಿಸಿದ, ‘ಸಲಗ’ ಸಿನಿಮಾ ನೋಡಿದವರಿಗೆಲ್ಲ ಒಂದು ಪಾತ್ರ ಅಚ್ಚಳಿಯದೇ ಮನಸಲ್ಲಿ ಉಳಿದುಕೊಂಡಿರುತ್ತದೆ. ಅದು ನಾಯಕನಟ ವಿಜಯ್‌ನ ಹರೆಯದ ಪಾತ್ರ. ಹುಡುಗುಬುದ್ಧಿಯ ತುಂಟತನ, ಹರೆಯದ ರೋಷಾವೇಶ, ತುಡುಗು ಹುಡುಗನನ್ನು ರೌಡಿಯಾಗಿಸುವ ವ್ಯವಸ್ಥೆಯ ವಿರುದ್ಧ ಆಕ್ರೋಶ ಎಲ್ಲವನ್ನೂ ಒಳಗೊಂಡಿದ್ದ ಆ ಪಾತ್ರದಲ್ಲಿ ನಟಿಸಿದ್ದು ಶ್ರೀಧರ್ ಎಂಬ ಪ್ರತಿಭಾವಂತ ಹುಡುಗ.

ಶ್ರೀಧರ್, ಮೈಸೂರಿನ ಉಯಿಲಾಳು ಎಂಬ ಹಳ್ಳಿಯವರು. ಎಂಟನೇ ತರಗತಿಯಲ್ಲಿ ಓದುತ್ತಿದ್ದಾಗಲೇ ಮಂಡ್ಯ ರಮೇಶ್ ಅವರ ‘ನಟನ’ ರಂಗಶಾಲೆಯಲ್ಲಿ ನಟನೆಯ ತರಬೇತಿಯನ್ನು ಪ್ರಾರಂಭಿಸಿದವರು. ಅಲ್ಲಿ ಮೂರು ವರ್ಷ ರಂಗಭೂಮಿಯ ಶಿಕ್ಷಣವನ್ನು ಪಡೆದು ನಂತರ ‘ಕಾವಾ’ ಚಿತ್ರಶಾಲೆಗೆ ಸೇರಿಕೊಂಡರು. ನಂತರ ಮಂಗಳೂರಿಗೆ ಹೋಗಿ ಜೀವನರಾಮ್ ಸುಳ್ಯ ಅವರ ಜೊತೆಯಲ್ಲಿ ಕೆಲಸ ಮಾಡಿದರು. ಮತ್ತೆ ಮೈಸೂರಿಗೆ ಬಂದು ಮೈಮ್ ರಮೇಶ್ ಅವರ ತಂಡದಲ್ಲಿ ಹಲವು ನಾಟಕಗಳಲ್ಲಿ ಕೆಲಸ ಮಾಡಿದರು.

ಹೀಗೆ ಬೇರೆ ಬೇರೆಯವರ ಜೊತೆಯಲ್ಲಿ ರಂಗಭೂಮಿ ಚಟುವಟಿಕೆಗಳಲ್ಲಿ ನಿರಂತರವಾಗಿ ತೊಡಗಿಕೊಂಡಿದ್ದ ಶ್ರೀಧರ್ ಅವರ ಒಂದು ಕಣ್ಣು ಸಿನಿಮಾ ಕ್ಷೇತ್ರದಲ್ಲಿಯೇ ನೆಟ್ಟಿತ್ತು. ಆದರೆ ಸರಿಯಾಗಿ ಸಿದ್ಧತೆ ಇಲ್ಲದೆ ಹೋಗಿ ಅತಂತ್ರನಾಗುವುದು ಅವರಿಗೆ ಇಷ್ಟವಿರಲಿಲ್ಲ. ಹಾಗಾಗಿ ಆಗೀಗ ಬಂದ ಸಣ್ಣ ಪುಟ್ಟ ಅವಕಾಶಗಳಲ್ಲಿ ನಟಿಸುತ್ತ, ಸಿನಿಮಾ ಕ್ಷೇತ್ರವನ್ನು, ಅದರ ಅಗತ್ಯಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸುತ್ತ ರಂಗಭೂಮಿಯಲ್ಲಿಯೇ ಮುಂದುವರಿದಿದ್ದರು.

ಈ ಹಿಂದೊಮ್ಮೆ ದುನಿಯಾ ವಿಜಯ್ ಅವರ ‘ವೀರಬಾಹು’ ಸಿನಿಮಾದಲ್ಲಿ ಒಂದು ಪುಟ್ಟ ಪಾತ್ರದಲ್ಲಿ ಶ್ರೀಧರ್ ನಟಿಸಿದ್ದರು. ಆಗಲೇ ಅವರ ಪ್ರತಿಭೆಯನ್ನು ಗುರ್ತಿಸಿದ್ದ ವಿಜಯ್, ‘ನಿಂಗೆ ಒಳ್ಳೆಯ ಪಾತ್ರ ಕೊಡಿಸುತ್ತೇನೆ’ ಎಂಬ ಭರವಸೆಯನ್ನೂ ಕೊಟ್ಟಿದ್ದರು.

ಅದಾದ ನಂತರ ‘ಧ್ವಜ’, ‘ರಾಜರಥ’ ಸಿನಿಮಾಗಳಲ್ಲಿ ಹಿನ್ನೆಲೆಯಲ್ಲಿ ಶ್ರೀಧರ್ ಕೆಲಸ ಮಾಡಿದರು. ‘ಸಲಗ’ ಸಿನಿಮಾದ ಪಾತ್ರವೊಂದಕ್ಕೆ ಹೊಸ ಕಲಾವಿದರು ಬೇಕು ಎಂದು ವಿಜಯ್ ಕೇಳಿದ್ದರಿಂದ, ಶ್ರೀಧರ್ ಮೂರು ನಾಲ್ಕು ಜನರ ಫೋಟೊ ಕಳಿಸಿಕೊಟ್ಟಿದ್ದರು. ಆದರೆ ಅವು ಯಾವುವೂ ವಿಜಯ್‌ಗೆ ಇಷ್ಟವಾಗಲಿಲ್ಲ. ಕೊನೆಗೊಮ್ಮೆ

